‘ಅಷ್ಟೇ ಅಲ್ಲ ಹೇಮಂತ, ನಾನು ನಂದಿಗೆ ಹೋದಾಗ್ಲೂ ಒಂದು ಕಪ್ಪು ಕಾರು ನಮ್ಮನ್ನು ಫಾಲೋ ಮಾಡ್ತಿತ್ತು, ಒಬ್ಬ ಸಾಧು ಅಲ್ಲಿ ನನ್ನನ್ನು ಫಾಲೋ ಮಾಡ್ತಾನೇ ಇದ್ದ...’ ಋತುವಿನ ಮಾತಿಗೆ ಹೇಮಂತ ಚಕಿತನಾದ. ಅಪಾಯದ ವಾಸನೆ ಪತ್ತೇದಾರನಿಗೆ ಬರತೊಡಗಿತ್ತು.

‘ಋತು, ಕೋಟೆ ಬಂಗಲೆಯಲ್ಲಿ ನಡೆಯುತ್ತಿರುವ ವಿಪರೀತಗಳಿಗೂ, ಹರಿಕೃಷ್ಣರು ನಂದಿಯಲ್ಲಿ ನಿನ್ನ ತಾಯಿಯ ಬಗ್ಗೆ ಹೇಳಿದ ಸತ್ಯ ಸಂಗತಿಗಳಿಗೂ, ನಿನ್ನನ್ನು ಎಡಬಿಡದೆ ಯಾರೋ ಹಿಂಬಾಲಿಸುತ್ತಿರುವುದಕ್ಕೂ ಒಂದಕ್ಕೊಂದು ಸಂಬಂಧವಿರ್ಬಹುದಾ?’ ಹೇಮಂತನ ಮಾತಿನಿಂದ ಋತು ಬೆಚ್ಚಿದಳು. ಅವ್ಯಕ್ತವಾದ ಭಯವೊಂದು ಅವಳ ಒಡಲಾಳದಿಂದ ಹುಟ್ಟಿ ದೇಹದಾದ್ಯಂತ ವ್ಯಾಪಿಸತೊಡಗಿತು.

ಋತುವಿನ ಮುಖದಲ್ಲಾದ ಬದಲಾವಣೆಯನ್ನು ಸೂಕ್ಷ್ಮವಾಗಿ ಗಮನಿಸಿದ ಹೇಮಂತ. ‘ಹೆದರಿದವರ ಮೇಲೆ ಹಾವು ಎಸೆದರು’ ಎನ್ನುವ ಹಾಗೆ ಮೊದಲೇ ಎಲ್ಲದಕ್ಕೂ ಭಯಪಡುವ ಹುಡುಗಿ....ಆತ್ಮಹತ್ಯೆಗೂ ಯತ್ನಿಸಿದವಳು. ಈಗ ತಾನು ಅವಳು ಬೆಚ್ಚುವ ರೀತಿಯಲ್ಲಿ ಮಾತನಾಡ ಬಾರದೆನಿಸಿತು ಅವನಿಗೆ.

‘ಋತು, ಸಂಬಂಧವಿರಬಹುದೇನೋ ಎನ್ನುವುದು ನನ್ನ ಊಹೆ, ಮುಂದೇನಾಗುತ್ತೋ ನೋಡೋಣ, ಆದ್ರೆ ನೀನು ಮಾತ್ರ ಇನ್ನು ಧೈರ್ಯವಾಗಿರ್ಬೇಕು. ರಮ್ಯಾಳ ತಂದೆ ಹೇಳಿದ ಹಾಗೆ ನಿನ್ನ ಜವಾಬ್ದಾರಿ ಈಗ ಹೆಚ್ಚಾಗಿದೆ. ನಿನ್ನ ಪ್ರತಿಯೊಂದು ನಡೆಯಲ್ಲೂ ನಾನು ಜೊತೆಗಿರ್ತೀನಿ, ಏನೇ ಅಪಾಯ ಬಂದ್ರೂ ನನಗೊಂದು ಕಾಲ್ ಮಾಡಿ ವಿಷ್ಯ ತಿಳಿಸು....ಭರತನ ಸಮಸ್ಯೆಯೊಂದು ಬಗೆಹರಿದಿದೆ, ಹಾಗೆಯೇ ಬಂಗಲೆಯ ಉಳಿದ ಸಮಸ್ಯೆಗಳನ್ನೂ ಬಗೆಹರಿಸೋಣ ಬಿಡು ಮರಿ..’ ಎಂದವನು ಧೈರ್ಯ ತುಂಬಿದಾಗ ಅವಳು ನಿರಾಳವಾದಳು.

ಹೇಮಂತನಿಗೆ ಗೆಳೆಯ ಅಜಯ್ ಕುಲಕರ್ಣಿಯ ನೆನಪಾಯಿತು. ಆ ದಿನ ರಮ್ಯಾಳ ಬಗ್ಗೆ ತನಗಿರುವ ಪ್ರೀತಿಯನ್ನು ಹೇಳಿಕೊಂಡಿದ್ದ. ಈಗ ಆ ವಿಷಯವನ್ನು ಮಾತನಾಡುವುದು ಸೂಕ್ತವೆನಿಸಿತು.

ಅಜಯ್ ಕುಲಕರ್ಣಿ ರಮ್ಯಾಳ ಆಕರ್ಷಣೆಗೆ ಬಿದ್ದಿರುವುದನ್ನು ಹೇಳಿದ.

‘ಋತು, ನನ್ನ ಫ್ರೆಂಡಿನ ಮನಸ್ಸಿನಲ್ಲೇನಿದೆ ಅನ್ನೋದನ್ನು ನಿಂಗೆ ಹೇಳಿದ್ದೀನಿ, ನೀನೀಗ ನಿನ್ನ ಫ್ರೆಂಡಿನ ಮನಸ್ಸಿನಲ್ಲೇನಿದೆ ಅಂತ ತಿಳ್ಕೊಂಡು ನಂಗೆ ಹೇಳ್ಬೇಕು...’ ಎಂದ ನಗುತ್ತಾ.

ಋತುವಿಗೆ ಈ ವಿಷಯ ಖುಷಿ ಕೊಡುವ ಸಂಗತಿಯೇ ಆಗಿದ್ದರೂ ಸಲಿಂಗಕಾಮಿ ಗಂಡನೊಂದಿಗೆ ಬಾಳಲಾರದೆ ಡೈವೋರ್ಸ್ ಕೊಟ್ಟ ರಮ್ಯಾಳ ದುರಂತ ದಾಂಪತ್ಯದ ನೆನಪಾಗಿ ಆತಂಕವೂ ಆಯಿತು. ಈ ವಿಷಯವನ್ನು ಅಜಯ್ ಹೇಗೆ ಸ್ವೀಕರಿಸಬಹುದು....? ರಮ್ಯಾಳನ್ನು ಮೊದಲಿನಂತೆಯೇ ಅವನಿಂದ ಪ್ರೀತಿಸಲು ಸಾಧ್ಯವೇ?

‘ಯಾಕೆ ಋತು, ಏನೋ ಯೋಚ್ನೆ ಮಾಡ್ತಿದ್ದಿ?’ ಹೇಮಂತ ಕೇಳಿದಾಗ ರಮ್ಯಾಳ ವಿಷಯವನ್ನು ಈಗ ಹೇಳುವುದೇ ಸಮಂಜಸವೆನಿಸಿತು.

ರಮ್ಯಾಳ ದುರಂತ ದಾಂಪತ್ಯದ ವಿಷಯವನ್ನು ಬಿಚ್ಚಿಟ್ಟಳು. ಸ್ವಲ್ಪ ಹೊತ್ತು ಹೇಮಂತ ಮೂಕನಂತೆ ಕುಳಿತುಬಿಟ್ಟ.

‘ರಮ್ಯಾಳ ಹಿಂದೆ ಇಂಥ ದುರಂತ ಕಥೆ ಇದೆ ಅಂತ ಗೊತ್ತೇ ಆಗಲ್ಲ ನೋಡು ಋತು, ಯಾವಾಗ್ಲೂ ನಗುನಗುತ್ತಾ, ಎಲ್ಲರನ್ನೂ ನಗಿಸುತ್ತಾ ಸಮಾಧಾನವಾಗಿ ಇರ್ತಾರಲ್ಲ...’

‘ಅದೆಲ್ಲಾ ಇರ್ಲಿ ಹೇಮಂತ್, ಇಷ್ಟೆಲ್ಲಾ ಕೇಳಿದ್ಮೇಲೂ ಅಜಯ್ ಮೊದಲಿನಂತೆ ರಮ್ಯಾಳನ್ನು ಪ್ರೀತಿಸ್ತಾರಾ?..’ ಅರ್ಧ ಅನುಮಾನದಿಂದಲೇ ಕೇಳಿದಳು ಋತು.

‘ಒಂದು ಕೆಲ್ಸ ಮಾಡೋಣ, ನೀನು ಈ ವಿಷ್ಯಾನ ರಮ್ಯಾಳ ಹತ್ತಿರ ಮಾತನಾಡು, ನಾನು ಅಜಯ್ ಹತ್ರ ಮಾತಾಡ್ತೀನಿ, ಅವ್ರಿಬ್ರೂ ಒಪ್ಪಿದ್ರೆ ಮುಂದುವರಿಯೋಣ...’ ಹೇಮಂತನ ಸಲಹೆ ಋತುವಿಗೂ ಒಪ್ಪಿಗೆಯಾಯಿತು.

ಅಷ್ಟರಲ್ಲಿ ರಮ್ಯ ಊಟಕ್ಕೆ ಕರೆಯಲು ಮಹಡಿಯೇರಿ ಬಂದಳು.

‘ನಿಮ್ಮಿಬ್ರ ಸರಸ ಸಲ್ಲಾಪ ಮುಗಿದಿದ್ರೆ ಊಟಕ್ಕೆ ಬರ್ಬೋದು....’ ಎಂದಳು ನಗುತ್ತಾ.

ರಮ್ಯಾಳ ಕೈ ರುಚಿ ಸೊಗಸಾಗಿತ್ತು. ಹೇಮಂತನಂತೂ ಹೊಗಳುತ್ತಲೇ ಊಟ ಮುಗಿಸಿದ.

‘ಋತು ನಂದಿಯಲ್ಲಿ ನಡೆದ ವಿಷಯಗಳನ್ನೆಲ್ಲಾ ನಂಗೆ ಹೇಳಿದ್ದಾಳೆ, ಎಲ್ಲಾ ವಿಷಯಗಳು ತಿಳಿದಿದ್ದು ಒಂದರ್ಥದಲ್ಲಿ ಒಳ್ಳೆಯದೇ ಆಯ್ತು, ಇನ್ನು ಕೋಟೆ ಬಂಗ್ಲೆಯಲ್ಲಿ ಅವ್ರು ಜಾಗ್ರತೆಯಾಗಿ ಹೆಜ್ಜೆ ಇಡ್ಬೇಕು...’ ಹೇಮಂತ ಅರ್ಥಗರ್ಭಿತವಾಗಿ ಮಾತನಾಡಿದ.

ಊಟವಾದ ಮೇಲೆ ತಾನೇ ಅವರನ್ನು ಕಾರಿನಲ್ಲಿ ಕರೆದುಕೊಂಡು ಹೊರಟ. ರಮ್ಯಾಳ ಪಿ.ಜಿ.ಯ ಮುಂದೆ ಅವರನ್ನಿಳಿಸಿ ಕೈ ಬೀಸಿದ. ಋತು ತನ್ನ ಕೈನೆಟಿಕ್ಕಿನಲ್ಲಿ ರಮ್ಯಾಳನ್ನು ಕರೆದುಕೊಂಡು ಕೋಟೆ ಬಂಗಲೆಯತ್ತ ಹೊರಟರೆ, ಹೇಮಂತ ಅದೇ ಏರಿಯಾದಲ್ಲಿರುವ ಗೆಳೆಯ ಅಜಯ್ ಕುಲಕರ್ಣಿಯ ಪೊಲೀಸ್ ಕ್ವಾರ್ಟರ್ಸ್ ಕಡೆಗೆ ಹೋಗಬೇಕೆಂದು ನಿಶ್ಚಯಿಸಿ ಗೆಳೆಯನಿಗೊಂದು ಕರೆ ಮಾಡಿದ.

ಮತ್ತೊಂದು ಗಂಟೆಯೊಳಗೆ ತಾನು ಕ್ವಾರ್ಟರ್ಸ್‌ಗೆ ಹಿಂದಿರುಗುವುದಾಗಿ ಅವನಿಂದ ಉತ್ತರ ಬಂದಾಗ ಒಂದು ಗಂಟೆಯವರೆಗೆ ಅಲ್ಲಿಯೇ ಕಾಯುವುದೆಂದು ನಿಶ್ಚಯಿಸಿದ ಹೇಮಂತ ಕ್ವಾರ್ಟರ್ಸ್ ಕಡೆಗೆ ಕಾರನ್ನು ತಿರುಗಿಸಿದ.

ಮೊದಲ ಮಹಡಿಯಲ್ಲಿ ಅಜಯ್ ಕುಲಕರ್ಣಿಯ ಮನೆಯಿತ್ತು. ಅಡುಗೆಯವನು ಪರಿಚಯದ ನಗು ಬೀರಿ ಹೇಮಂತನನ್ನು ವಿಸಿಟರ್ಸ್ ರೂಮಿನಲ್ಲಿ ಕೂರಿಸಿ ಟೀ, ಬಿಸ್ಕತ್ತುಗಳನ್ನು ನೀಡಿದ.

ವಿಸಿಟರ್ಸ್ ರೂಮಿನಲ್ಲಿ ಕ್ರಿಮಿನಲ್ ತನಿಖೆಗೆ ಸಂಬಂಧಿಸಿದ ಬಹಳಷ್ಟು ಪುಸ್ತಕಗಳಿದ್ದವು. ಒಂದೊಂದನ್ನೇ ತಿರುವಿ ಹಾಕುತ್ತಿದ್ದವನಿಗೆ ಸಮಯ ಸರಿದು ಹೋಗುತ್ತಿರುವುದೇ ತಿಳಿಯಲಿಲ್ಲ.

ಅಜಯ್ ಬಂದು ಕರೆದಾಗಲೇ ಎಚ್ಚರ....ಅಜಯ್ ತನ್ನ ಯೂನಿಫಾರ್ಮನ್ನು ಬಿಚ್ಚಿಟ್ಟು ಸಾದಾ ಉಡುಪಿನಲ್ಲಿ ಬಂದಿದ್ದ.

‘ಹೇಮಂತ್, ಬಂದು ತುಂಬಾ ಹೊತ್ತಾಯ್ತಾ?..ಇಲ್ಲಿ ಕುಳಿತುಕೊಳ್ಳುವ ಬದ್ಲು ನನ್ನ ರೂಮಿನಲ್ಲೇ ಕುಳಿತುಕೊಳ್ಳಬಹುದಿತ್ತು..’ ಉಪಚರಿಸಿದ.

ಅಜಯ್ ಜೊತೆಗೆ ಮತ್ತೊಮ್ಮೆ ಟೀ ಸಮಾರಾಧನೆಯಾಯಿತು. ಇಬ್ಬರೂ ರೂಮಿಗೆ ಹೊಂದಿಕೊಂಡಿರುವ ಬಾಲ್ಕನಿಯಲ್ಲಿ ಏಕಾಂತವಾಗಿ ಮಾತನಾಡಲು ಕುಳಿತರು.

## ಇಲ್ಲಿಯವರೆಗೆ



ನಂದಿಯಿಂದ ಋತು–ರಮ್ಯ ವಾಪಸ್ಸಾಗುತ್ತಾರೆ. ಮನೆಗೆ ಬಂದ ಸ್ವಲ್ಪ ಹೊತ್ತಿಗೆ ಹೇಮಂತ– ಅಜಯ್‌ಕುಲಕರ್ಣಿ ಕೋಟೆ ಬಂಗಲೆಗೆ ಬರುತ್ತಾರೆ. ಕೊಲೆಗಾರನ ಪತ್ತೆ ಆಗಿದೆ. ಆತ ಈ ಕೋಟೆಬಂಗಲೆಯಲ್ಲೇ ಇದ್ದಾನೆ. ಅದು ಭರತನೇ ಎಂದು ಹೇಳಿದಾಗ ಎಲ್ಲರಿಗೂ ಅಚ್ಚರಿಯಾಗುತ್ತದೆ. ಭರತ ಅಪ್ಪನ ಬಳಿ ಕ್ಷಮೆ ಕೇಳುತ್ತಾನೆ. ಭರತನ ಮೇಲೆ ಅನುಮಾನ ಬರಲು ಕಾರಣಗಳೇನು ಎಂಬುದನ್ನು ಹೇಮಂತ ಹಂತ ಹಂತವಾಗಿ ವಿವರಿಸುತ್ತಾನೆ. ಆತನ ಕೈಗೆ ಕೋಳ ತೊಡಿಸಿ ಸ್ಟೇಷನ್‌ಗೆ ಕರೆದೊಯ್ಯುತ್ತಾರೆ. ಈ ಎಲ್ಲ ವಿದ್ಯಮಾನಗಳಿಂದ ಬೇಸತ್ತ ಋತು ಸೀರೆಯನ್ನು ಬಳಸಿ ನೇಣು ಹಾಕಿ ಸಾಯುವ ಪ್ರಯತ್ನ ಮಾಡುತ್ತಾಳೆ. ಆಗ ಹೇಮಂತನ ಕರೆ ಬರುತ್ತದೆ. ರಮ್ಯ ಎತ್ತಿಕೊಂಡಾಗ ಆಗಲಿರುವ ಅನಾಹುತಕ್ಕೆ ತೆರೆ ಬೀಳುತ್ತದೆ. ಸಾಯುವ ನಿರ್ಧಾರ ಮಾಡಿದ ಋತುವಿನ ಮೇಲೆ ರಮ್ಯ ರೇಗುತ್ತಾಳೆ.